**ದಿನಾಂಕ 05.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಸಿ.ಜಿ.ಆರ್. ವಕೀಲರಿಂದಃ-**

ನಾನು ದಾವಾ ಹಾಕಿರುವ ದಾವಾ ಷೆಡ್ಯೂಲ್ ಸ್ವತ್ತುಗಳು ಈಗ ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ. ನನ್ನ ತಂದೆಗೆ ಸದರಿ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿರುತ್ತವೆ. ದಾವಾ ಐಟಂ ನಂ.6 ನ್ನು 1 ನೇ ಪ್ರತಿವಾದಿಯು ಕ್ರಯಕ್ಕೆ ಖರೀದಿಸಿದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.6 ಪ್ರತಿವಾದಿ 1 ರವರ ಹೆಸರಿನಲ್ಲಿ ಕ್ರಯ ಪತ್ರವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅಜ್ಜಿ ಒಟ್ಟು ಕುಟುಂಬದ ಪರವಾಗಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಐಟಂ ನಂ.6 ನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ದಾವಾ ಐಟಂ ನಂ.6 ನ್ನು ಅವರು ಸ್ವರ್ರಾಜಿತವಾಗಿ ಗಳಿಸಿದ ಸಂಪಾದನೆಯಿಂದ ಖರೀದಿಸಿದಂತಹ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಈಗ ಜಿಗಣೆಹಳ್ಳಿಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಜಿಗಣೆಹಳ್ಳಿಯಲ್ಲಿ ಒಂದು ನಿವೇಶನವು ತನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ನಿವೇಶನವನ್ನು ನನ್ನ ತಂದೆಯವರು ಒಟ್ಟು ಕುಟುಂಬದ ಆದಾಯದಿಂದ ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ನಿವೇಶನವನ್ನು ನನ್ನ ಹೆಂಡತಿಯ ತವರು ಮನೆಯವರು ನನ್ನ ಹೆಂಡತಿ ನೀಡಿದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಯಾದ 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಜಮೀನಿನಲ್ಲಿ ಇದ್ದ ಬೇವಿನ ಮರ, ತುಗ್ಲಿ ಮರವನ್ನು ಕಡಿದು ನನ್ನ ಹೆಂಡತಿ ಹೆಸರಿನಲ್ಲಿರುವ ನಿವೇಶನದಲ್ಲಿ ಮನೆಯನ್ನು ನಿರ್ಮಿಸಲು ಕಿಟಕಿ-ಬಾಗಿಲುಗಳನ್ನು ಮಾಡಿಸಲು ನೀಡಿರುತ್ತಾರೆ, ಸಾಕ್ಷಿಯು ಬೇವಿನ ಮರವನ್ನು ಮಾತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ಹೆಂಡತಿಯ ಹೆಸರಿನಲ್ಲಿರುವ ನಿವೇಶನದಲ್ಲಿ ಮನೆಯನ್ನು ನಿರ್ಮಿಸಲು 1 ನೇ ಪ್ರತಿವಾದಿಯೇ ನೀಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ನಾವು ಬೇರೆ ಇರಲಿ ಎಂದು ನಮಗೆ ಮನೆಯನ್ನು ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ 1 ನೇ ಪ್ರತಿವಾದಿಗೆ ವಿಭಾಗದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ನಾನು ನನ್ನ ವಂಶವೃಕ್ಷದಲ್ಲಿ ನನ್ನ ತಂದೆಯ ಅಕ್ಕ–ತಂಗಿಯರನ್ನು ತೋರಿಸಿದ್ದು, ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಿಭಾಗ ಕೊಡಬಾರದು ಎಂಬ ಉದ್ದೇಶದಿಂದ ನನ್ನ ತಂದೆಯ ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷದಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ, ಸಾಕ್ಷಿಯು ಅವರು ಈಗಲೂ ಬಂದರೆ ಪಾಲು ಕೊಡಲು ತಯಾರಿರುವುದಾಗಿ ನುಡಿಯುತ್ತಾರೆ.

ನಾನು ಸಲ್ಲಿಸಿರುವ ನಿಪಿ.1ರ ವಂಶವೃಕ್ಷದಲ್ಲಿ ನಮೂದಿಸಿರುವ ಪಕ್ಷಗಾರರೆಲ್ಲರಿಗೂ ದಾವಾ ಐಟಂ ನಂ.1 ರಿಂದ 5, 7 ರಿಂದ 9ರ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ.6, 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿರುವ ನಿವೇಶನದಲ್ಲಿರುವ ಮನೆಯಲ್ಲಿಯೂ ಸಹ ನನ್ನ ವಂಶವೃಕ್ಷದಂತೆ ನಮೂದಿಸಿರುವ ಪಕ್ಷಗಾರರೆಲ್ಲರಿಗೂ ಹಿಸ್ಸೆಯ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದಃನ್ಯಾ:ದಂ.,ರವರು ಕಡೂರು.